ಇದು ಉಗಿಯಲಾಗದ... ನುಂಗಲಾಗದ ಬಿಸಿತುಪ್ಪ. ಏನಾದರೊಂದು ನಿರ್ಧರಿಸಬೇಕು ಎನಿಸಿ ಬಂದು ಮಂಚದ ಮೇಲುರುಳಿದ್ದ. ಅರೆನಿದ್ದೆಯಲ್ಲಿ ಕಂಡದ್ದು ಕನಸೋ... ದಿಟವ್ವೋ ತಿಳಿಯಲಿಲ್ಲ. ದೀರ್ಘವಾದ ಹೂವು, ಮುಳ್ಳುಗಳಿಂದ ತುಂಬಿದ ಹಾದಿಯಲ್ಲಿ ಅವನು ಅನಾಯಾಸವಾಗಿ ನಡೆಯುತ್ತಿದ್ದಾನೆ. ಜೊತೆಗಿದ್ದವರಿಗೆ ಅದು ಕೆಂಡದ ಹಾಸಿನಂತೆ ಭಾಸವಾಗುತ್ತಿದೆ. ಒಬ್ಬೊಬ್ಬರೇ ಕಳಚಿಕೊಂಡು ಮಾಯವಾಗುತ್ತಿದ್ದಾರೆ. ನೆಂಟರು, ಸ್ನೇಹಿತರು, ಪತ್ನಿ, ಮಕ್ಕಳೂ ಸಹ. ಅವನು ಒಬ್ಬಂಟಿ ಪಯಣಿಗ. ಮುಂದೆ ದೂರದಲ್ಲಿ ಎಷ್ಟೊಂದು ಜನ ಸಾಗುತ್ತಿದ್ದಾರೆ ಹಿಂಡು ಹಿಂಡಾಗಿ. ಅವನಿಗೆ ಅವರನ್ನು ಸೇರಲಾಗತ್ತಿಲ್ಲ. ಹಿಂದೆ ಖಾಲಿ ಬೀದಿಯಲ್ಲಿ ದೂರದೂರದಲ್ಲಿ ಒಬ್ಬರೋ ಇಬ್ಬರೋ. ಥಟ್ಟನೆ ಎಚ್ಚರವಾಗಿತ್ತು. ಸತ್ಯದ ದಾರಿ ಇಷ್ಟೊಂದು ಕಠಿಣವೇ ಎನಿಸಿತ್ತು. ಬಾಲ್ಯದಿಂದಲೂ ನಡೆದ ಘಟನೆಗಳು ಒಂದೊಂದಾಗಿ ಮನದ ಪರದೆಯ ಮೇಲೆ ಮೂಡಿದವು. ಚಿತ್ರಪಟಗಳಂತೆ ಓಡಿದವು.

ಹೌದು, ಅವನ ಹೆಸರು ಸತ್ಯನಾರಾಯಣ. ಚಿಂತಾಮಣಿಯ ರೆಡ್ಡಿಗಳ ಮನೆಯಲ್ಲಿ 1955ರಲ್ಲಿ ಹುಟ್ಟಿದವನಿಗೆ ಯಾವುದೇ ಕೊರತೆ ಇರಲಿಲ್ಲ. ಊಟ ಉಡಿಗೆ, ಹಾಲು, ಹೈನು, ವ್ಯಂಗ್ಯಬಾಣ, ಬೈಗುಳು... ಎಲ್ಲವೂ ಯಥೇಚ್ಛವಾಗಿದ್ದಲ್ಲಿ ಹಿರಿಯ ಮಗನಾಗಿದ್ದ.

